## ಥಟ ಅಂತ ಹೇಳ್ಬೇಡಿ ಸುಮ್ನೇ ಕೇಳಿ...

ಗೋಡೆಗೆ ಆತು ಕೂತ್ಕೊಂಡು, ಕಾಲು ಅಷ್ಟುದ್ದ ಚಾಚಿಕೊಂಡು, ತಲೆ ಕೆರಕೊಂಡು ಉದುರುತ್ತಿದ್ದ ಕೂದಲುಗಳನ್ನು ಒಂದೆಡೆ ರಾಶಿ ಹಾಕುತ್ತ, ಯಾವದೋ ಹಳೆಯ ಸಾಪ್ತಾಹಿಕ ವಿಜಯದ ಊರ್ವಶಿ ಅಂಕಣ ಒದ್ತಾ ಕೂತಿದ್ದೆ, ಇವಳು ಬಂದು
"ಎನ್ ಮಾಡ್ತಾ ಇದೀರಾ" ಅಂದ್ಲು
"ಊರ್ವಶಿ ಎನಂತಾಳೇ ನೋಡ್ತಿದೀನಿ".
"ಅಲ್ಲಾ, ಅಲ್ಲೂ ಹುಡುಗೀರ ಕಾಲ್ಂ ಓದ್ತೋದಾ"
"ಅದು ಹುಡುಗೀನೆ ಬರೆದಿರೊದು ಅಂತ ಹೇಗೆ ಹೇಳ್ತೀಯಾ, ಹುಡುಗಾನೆ ಊರ್ವಶಿ ಅಂತ ಹೆಸರಿಟ್ಟುಕೊಂಡು ಬರೆದಿರಬಹುದು, ಇಷ್ಟಕ್ಕೂ ಅದೇನು ಮಹಿಳೆಯರ ಕಾಲಂ ಅಲ್ವಲ್ಲ, ಟೆಕೀಟೀಸಿ ಅಂತ ಎಲ್ರ ಕಾಲೆಳೆಯೊ ಹಾಸ್ಯ ತುಣುಕುಗಳು" ಅಂದೆ.
"ಎನ್ ಕೇಳಿದ್ರೂ ಥಟ ಅಂತ ರೆಡಿಮೇಡ ಆನ್ಸರ ಇರತ್ತೆ ನಿಮ್ಮ ಹತ್ರ"
ಹಾಗೇ, ಬಯ್ದುವಳು, ನನ್ನ ಕಾಲುಗಳನ್ನೇ ತಲೆದಿಂಬಿನಂತೆ ಮಾಡಿಕೊಂಡು, ಅಲ್ಲೇ ಒರಗಿಕೊಂಡು ಟೀವೀ ಆನ್ ಮಾಡಿಕೊಂಡು ನೋಡತೊಡಗಿದ್ಲು. ನನ್ನ ಪಾಡಿಗೆ ನಾ ಓದತೊಡಗಿದೆ. ಟೀವೀ ಅಂದ್ರೆ ಒಂದೇ ಚಾನೆಲ್ಲು ಏನಿಲ್ಲವಲ್ಲ, ಅದಕ್ಕೆ ಇಲ್ಲಿ ಜಾಹೀರಾತು ಬಂದ್ರೆ ಅಲ್ಲಿ, ಅಲ್ಲಿ ಬಂದ್ರೆ ಮತ್ತೊಂದಲ್ಲಿಗೆ, ಚಾನೆಲ್ಲು ಬದಲಾಗುತ್ತಿತ್ತು, ಅವಳ ಕೈಯಲ್ಲೇ ರಿಮೋಟು ಅರ್ಧ ಸವೆದಿದ್ದು, ಅಕ್ಷರಗಳೆಲ್ಲ ಅಳಿಸಿಹೋಗಿ "ಲೇ ಮ್ಯೂಟ್ ಬಟನ್ನು ಯಾವುದೇ" ಅಂತ ಕೇಳಿ, ಅವಳು ಹೇಳಿ, ನಾ ಮ್ಯೂಟ್ ಮಾಡೊ ಹೊತ್ತಿಗೆ ಬಂದ ಮೊಬೈಲ್ ಕಾಲ್ ಹೋಗಿರುತ್ತಿತ್ತು. ಆದರೆ ಇಂದೇಕೋ ಅದೇ ಒಂದೇ ಚಾನಲ್ಲಿನಲ್ಲಿದೆ, ಜಾಹೀರಾತು ಬಂದಾಗಲೂ ಬೇರೆ ಬದಲಾಯಿಸುತ್ತಿಲ್ಲ ಅವಳು. ಅವಳ ಗಮನ ಬೇರೆಲ್ಲೊ ಇರಬೇಕು ಅನಿಸಿತು. ಪೇಪರು ಆಕಡೆ ಬೀಸಾಕಿ. "ಎನ್ ಯೋಚಿಸ್ತಿದೀಯಾ" ಅಂದೆ. "ಆಂ" ಅಂತ ಅಂದವಳು ಯೋಚನೆಗಳಿಂದ ಹೊರಗೆ ಬಂದಳಂತೆ ಕಾಣುತ್ತೆ. "ಏನಿಲ್ಲ" ಅಂದ್ಲು. "ಹೇಳು, ನಂಗೊತ್ತು ಏನೊ ಯೋಚಿಸ್ತಿದೀಯಾ" ಅಂದೆ, "ಹೇಳಿದ್ರೆ ಅದಕ್ಕೂ ಒಂದು ಥಟ ಅಂತ ಉತ್ತರ ಹೇಳಿ ಬಾಯಿ ಮುಚ್ಚಿಸಿಬಿಡ್ತೀರ" ಅಂತ ಆರೋಪಿಸಿದಳು. ನಾ ಮತ್ತೆ ಮಾತಾಡಲಿಲ್ಲ.

ಅವಳ ಯೋಚನೆಗಳೆಲ್ಲಾ, ನನ್ನ ತಲೆ ತುಂಬಾ ತುಂಬಿ ಬಿಟ್ಟಿತ್ತು, ನಿಜವಾಗ್ಲೂ ಹಾಗೆ ಮಾಡ್ತೀನ, ನನ್ನ ಹತ್ರ ಅಷ್ಟೊಂದು ಉತ್ತರಗಳಿವೆಯಾ, ಮತ್ತೆ **ಪ್ರಶ್ನೆ ಕೇಳಿದ್ರೆ ಉತ್ತರ, ತೊಂದ್ರೆ ಹೇಳಿದಮೇಲೆ ಸಲಹೆ ಕೊಡೋದು ತಪ್ಪಾ!** ಯೋಚಿಸ್ತಾನೇ ಇದ್ದೆ. ಅಂಗಾತ ಮಲಗಿ ಟೀವೀ ನೊಡುತ್ತಿದ್ದವಳು, ಬೋರಲಾಗಿ ಮೇಲೆ ಸರಿದು, ಹೊಟ್ಟೆ ಸುತ್ತ ಕೈ ಸುತ್ತಿ ಅವುಚಿಕೊಂಡು ಅಪ್ಪಿ ಮಲಗಿದ್ಲು, ಅವಳ ಜಡೆ ಕೈಯಲ್ಲಿ ತೆಗೆದುಕೊಂಡು ಅತ್ತಿತ್ತ ಬೀಸುತ್ತ ಇನ್ನೂ ಯೋಚನೆಗಳಲ್ಲೇ ಕುಳಿತೆ. ಬಹಳ ಹೊತ್ತು ಮಾತಿಲ್ಲದ್ದು ನೋಡಿ, "ರೀ ನಾ ಹಾಗಂದದ್ದಕ್ಕೆ ಬೇಜಾರಾಯ್ತಾ" ಅಂದ್ಲು, ಇಲ್ಲ ಅನ್ನುವಂತೆ ತಲೆ ಅಲ್ಲಾಡಿಸಿದೆ, ಬೊರಲಾಗಿ, ಮುಖ ನನ್ನ ಮಡಿಲಲ್ಲಿ ಮುಚ್ಚಿಕೊಂಡು ಮಲಗಿದ್ದವಳಿಗೆ ಕಾಣಿಸಿರಲಿಕ್ಕಿಲ್ಲ, ತಲೆ ಮೇಲೆತ್ತಿ ಮತ್ತೆ ಕೇಳಿದ್ಲು, ಮತ್ತೆ ತಲೆ ಆಲ್ಲಾಡಿಸಿದೆ, "ರೀ ಬಾಯಿ ಬಿಡಿ, ನಾನೇನು ಮಾತಾಡಲೇಬೇಡಿ ಅಂದ್ನಾ" ಅಂತದದ್ದಕ್ಕೆ ತಡವರಿಸಿ "ಇಲ್ಲ" ಅಂದೆ.
"ಮತ್ತೆ ಎನೊ ಯೋಚನೆ ಮಾಡ್ತಾ ಇದೀರ"
"ಇಲ್ಲ ಹಾಗೇನಿಲ್ಲ, ಈ ರಿಮೋಟ್ ನಲ್ಲಿ ಆಫ್ ಮಾಡೊ ಬಟನ್ನು ಯಾವ್ದು"
"ಅಷ್ಟೂ ಗೊತ್ತಿಲ್ವ, ಕೆಂಪು ಬಟನ್ನು" ಅಂದ್ಲು.
ಟೀವಿ ಆಫ್ ಮಾಡಿದೆ, ಗೊತ್ತಿದ್ದೂ ಗೊತ್ತಿದ್ದೂ ಆಫ್ ಬಟನ್ನು ಯಾವುದು ಅಂತ ಕೇಳಿದ್ದೆ, ಅವಳು ಥಟ ಅಂತ ಉತ್ತರ ಕೊಡ್ತಳಾ ಇಲ್ವಾ ಅಂತ ನೋಡೋಕೆ. "ನಿಜವಾಗ್ಲೂ ಹಾಗೆ ನಾನು ಯಾವಾಗ್ಲೂ ಮಾಡ್ತೀನಾ, ಪ್ರಶ್ನೆ ಕೇಳಿದ್ರೆ ಉತ್ತರ ಹೇಳೊದು ತಪ್ಪಾ, ಈಗ ನಾನು ಬಟನ್ನು ಯಾವ್ದು ಅಂತ ಕೇಳಿದ್ರೆ ನೀನು ಹೇಳಿದೆ" ಅಂತ ಅವಳನ್ನೇ ಕೇಳಿದೆ. "ರೀ ಅದೆಲ್ಲ ಏನಿಲ್ಲ ಬಿಟ್ ಹಾಕಿ ಸುಮ್ನೇ ಹೇಳಿದೆ" ಅಂದ್ಲು, "ಇಲ್ಲ, ನೀನೇನೊ ಮುಚ್ಚಿಡ್ತಾ ಇದೀಯಾ ಹೇಳು" ಅಂತ ಮತ್ತೆ ಕೆದಕಿದೆ, "ಸುಮ್ನೇ ಅಂದನಲ್ಲ" ಅಂತ ಮತ್ತೆ ಸಿಡುಕಿದ್ಲು, ನಾನೂ ಸುಮ್ಮನಾದೆ, ಅವಳ ಸರಿಸಿ ಎದ್ದು ಹೋಗಲು ನೋಡಿದೆ, ಬಿಡಲಿಲ್ಲ, ಮುಖ ಸಿಂಡರಿಸಿಕೊಂಡು ಸುಮ್ನೆ ಕೂತೆ, ಅವಳು ನನ್ನ ನೋಡಿದ್ರೂ, ಮತ್ತೆ ಪೇಪರು ಎತ್ತಿಕೊಂಡು ಕೂತೆ, ಈಗ ಹೇಳದಿದ್ರೆ ನಾನಿನ್ನು ಮಾತಾಡಲಿಕ್ಕಿಲ್ಲ ಅನಿಸಿರಬೇಕು ಅವಳಿಗೆ. "ನೀವ ಬೇಜಾರ ಮಾಡ್ಕೊಳ್ಳಲ್ಲ ಅಂದ್ರೆ ಹೇಳ್ತೀನಿ" ಅಂತಂದ್ಲು, ಪೇಪರು ಬೀಸಾಕಿ ಮೈಯೆಲ್ಲ ಕಿವಿಯಾಗಿಸಿಕೊಂಡು ಕೂತೆ".

"ಯಾವಾಗ್ಲೂ ಏನಾದ್ರೂ ಕೇಳಿದ್ರೆ, ಎಲ್ಲದಕ್ಕೂ ಉತ್ತರ ಹೇಳ್ಬೇಕು ಅಂತ ಇರಲ್ಲಾರೀ, ಕೆಲವೊಮ್ಮೆ ಬರೀ ಮನಸಿಲ್ಲಿರೋದನ್ನ ಹೇಳ್ಬೇಕು ಅಂತಿರತ್ತೆ, ಯಾರೊ ನಮ್ಮ ನೋವು ಕೇಳಲಿ ಅಂತ ಇರತ್ತೆ, ನಿಮ್ಮ ರೆಡಿಮೇಡ ಸೊಲುಶನ್ ಗಳು ಬೇಕಿರಲ್ಲ, ಸುಮ್ನೆ ಮಾತು ಕೇಳೋ ಕಿವಿ ಬೇಕಿರತ್ತೆ" ಅಂದ್ಲು, ಯಾಕೊ ತಿಳೀದವರ ಹಾಗೆ ಮುಖ ಮಾಡಿದ್ದೆ, ಮತ್ತೆ ಹೇಳತೊಡಗಿದ್ಲು "ತಿಳೀಲಿಲ್ವಾ, ಹೇಳ್ತೀನಿ ಕೇಳಿ ಈಗ ನನಗೆ ತಲೆ ನೋವಿದೆ ಅಂತ ಇಟ್ಕೊಳ್ಳಿ, ನಾನು ನಿಮ್ಮ ಹತ್ರ ಬಂದು ತಲೆ ನೋವಿದೆರೀ ಅಂದ್ರೆ, ಮಾತ್ರೆ ತುಗೊ ಎಲ್ಲ ಸರಿಯಾಗತ್ತೆ ಅಂತೀರಿ ಥಟ ಅಂತ!, ಆದ್ರೆ ಅದು ನಂಗೂ ಗೊತ್ತು, ಅದನ್ನ ನಿಮ್ಮಿಂದ ನಾನು ಕೇಳೊಕೆ ಅಂತ, ನಿಮ್ಮನ್ನ ಕೇಳಿಲ್ಲ, ನಿಮ್ಮ ಹತ್ರ ನನ್ನ ನೋವು ಹೇಳ್ಕೊಬೇಕು ಅಂತ ಆಸೆ ಇರತ್ತೆ, ಯಾರಾದ್ರೂ ನನ್ನ ನೋವು ಕೇಳಲಿ ಅಂತ ಅಷ್ಟೆ, ಅದನ್ನ ಕೇಳದೆ, ಸುಮ್ನೇ ಮಾತ್ರೆ ತುಗೊ ಅಂದ್ರೆ" ಅಂದ್ಲು "ಹಂ... ಮತ್ತೆ ಎನ್ ಮಾಡ್ಬೇಕು ಅಂತೀಯ" ಅಂದೆ, "ಏನೂ ಬೇಡ, ಸುಮ್ನೆ ಯಾಕೆ ಏನಾಯ್ತು, ಬಹಳ ನೋವಿದೆಯಾ, ಅಂತ ನಾಲ್ಕು ಸಾಂತ್ವನದ ಮಾತು ಸಾಕು, ಅದನ್ನೇ ಎದುರಿನ ವ್ಯಕ್ತಿ ನಿರೀಕ್ಷಿಸೋದು, ಇದೇ ಈಗ ನೋಡಿ, ತಲೆ ಕೂದಲು ಉದುರಿ ಬೀಳ್ತಾ ಇದೆ ನಿಮಗೆ, ಇನ್ನೊಂದಿಷ್ಟು ದಿನದಲ್ಲಿ ಬೋಡು ತಲೆ ಬಾಣಲಿ ಆಗೋದು ಗ್ಯಾರಂಟಿ, ಅದಕ್ಕೆ ನೀವು ಬಂದು ನನ್ನ ಹತ್ರ, ಕೇಳಿದ್ರೆ, ತಲೆಗೆ ಎಣ್ಣೆ ಸ್ನಾನ, ಶಾಂಪೂ ಹಾಕಿ ತೊಳೀರೀ ಹೊಟ್ಟು ಆಗಿರಬೇಕು, ಟೆನ್ಷನ ಸ್ವಲ್ಪ ಕಡಿಮೆ ಮಾಡ್ಕೊಳ್ಳಿ ಅಂತ ಉಪದೇಶ್ ಕೊಟ್ರೆ!?. ಅದು ನಿಮಗೂ ಗೊತ್ತಿದೆ, ಅದನ್ನ ನೀವು

ಮಾಡ್ತಾ ಇದೀರಿ, ಅದೇ ಬದಲಿಗೆ, ರೀ ಯಾವಾಗಿಂದ ಹೀಗೆ ಆಗ್ತಿದೆ? ಅಂತ ವಾಪಸ್ಸು ಕೇಳಿ, ಕೂದಲೇನು ಬಿಡ್ರೀ, ನೀವು ಹೇಗಿದ್ರೂ ಚೆನ್ನಾಗಿ ಕಾಣ್ತೀರಿ ಅಂತ, ಸ್ವಲ್ಪ ಉಬ್ಬಿಸಿ, ಆ ಮೇಲೆ, ಏನೇನು ಉಪಚಾರ ಪ್ರಯತ್ನ ಮಾಡೀದೀರಾ ಅದಕ್ಕೆ, ಅಂತ ಕೇಳಿ ಆಮೇಲೆ ನನ್ನ ಸಲಹೆ ಅಂತ ಕೊಟ್ರೆ ಅದು ಚೆನ್ನಾಗಿರತ್ತಲ್ವಾ" ಅಂದ್ಲು ಭಲೇ ಕಿಲಾಡಿ ಇವಳು, ಅಲ್ಲಾ ಏನೇನು ತಿಳೀದುಕೊಂಡೀದಾಳೆ ಅಂತೀನಿ, ನನಗೆ ನನ್ನವಳ ಬಗ್ಗೆ ವಿಚಿತ್ರ ಹೆಮ್ಮೆಯುಂಟಾಯಿತು. "ಸೂಪರ್, ಅಲ್ಲ ಇದೆಲ್ಲ ಹೇಗೇ ತಿಳೀತು ನಿಂಗೆ" ಅಂದೆ "ನಿಮ್ಮ್ ಥಟ ಅಂತ ಉತ್ತರ ಕೇಳಿ, ಕೇಳಿ ಆದ, ಅನುಭವ" ಅಂದ್ಲು. "ಅಂದಹಾಗೆ ನಾನೇನು, ಬಾಣಲಿ ಆಗಲ್ಲ" ಅಂದೆ "ಆದ್ರೂ ನೀವು ನಂಗೆ ಚೆನ್ನಾಗೇ ಕಾಣ್ತೀರಾ" ಅಂದ್ಲು, ಮುಗುಳ್ನಕ್ಕೆ.

"ಮೊದಲೇ ಹೇಳೊದು ತಾನೆ" ಅಂದೆ "ಹೇಳ್ಬೇಕು ಅನ್ಕೊಂಡೆ ಬಹಳ ಸಾರಿ, ಅಂದು ಮದುವೆಲಾದದ್ದು ನೆನಪಿದೆಯಾ, ನಾನು ನನ್ನ ಗೆಳತಿ ಮಾತಾಡ್ತಾ ನಿಂತಿದ್ವಿ, ಅವಳು ನಂಗೆ ಶೀತ ಆಗಿದೆ ಕಣೇ ಅಂತ ಹೇಳ್ತಿದ್ದಂಗೆ, ಮಾತ್ರೆ ತುಗೊಳ್ಳಿ ಡಿ–ಕೊಲ್ಡ ಚೆನ್ನಾಗಿರತ್ತೆ ಅಂತ ಥಟ ಅಂತ ಉತ್ತರದೊಂದಿಗೆ ನಡುವೆ ಬಾಯಿ ಹಾಕಿದ್ರಿ, ಅವಳು ಕೊಟ್ಟ ಉತ್ತರ ನೆನಪಿದೆ ತಾನೆ" ಅಂದ್ಲು "ಹೂಂ ಅದಹೇಗೆ ಮರೆಯೋಕಾಗತ್ತೆ 'ನಾನು ಡಾಕ್ಟರು ನಂಗೊತ್ತಿದೆ' ಅಂತಂದಿದ್ಲು, ಡಾಕ್ಟರಿಗೆ ಮಾತ್ರೆ ಹೇಳಿದ್ದೆ ನಾ" ಅಂತ ನಕ್ಕೆ..."ನಂಗೆಷ್ಟು ಮುಜುಗರ ಆಗಿತ್ತು ಗೊತ್ತಾ, ಅಂದೇ ಹೇಳಬೇಕೆಂದಿದ್ದೆ, ಆದ್ರೆ ಹೇಳ್ಲಿಲ್ಲ" ಅಂದ್ಲು. "ಎಲ್ಲಿದಾಳೆ ಅವಳು ಈಗ" ಅಂದೆ, "ಯಾಕೆ ಮಾತ್ರೆ ತುಗೊಂಡ್ಲಾ ಇಲ್ಲಾ, ಅಂತ ಕೇಳ್ಬೇಕಿತ್ತಾ" ಅಂತ ರೇಗಿದಳು.

"ಮೊನ್ನೆ ತಾನೆ ಅತ್ತೆ ಮಾವ ಬಂದಿದ್ರಲ್ಲ ಅದೇ ನಿಮಗೆ ಆಕ್ಸಿಡೆಂಟ್ ಆದಾಗ, ಊರಿಂದ ಇಲ್ಲೀವರೆಗೆ ಕೊನೇ ಸೀಟ್ನಲ್ಲಿ ಕೂತು ಮೈಕೈ ನೋವು ಅಂತಿದ್ರೆ, ನೀವು 'ಸ್ಲೀಪರನಲ್ಲಿ ಬರೋದು ತಾನೆ, ರೆಸ್ಟ ತುಗೊಳ್ಳಿ ಸರಿ ಹೋಗತ್ತೆ' ಅಂದಿದ್ರಿ. ಅವರೇನು ಬೇಕು ಅಂತ ಲಾಸ್ಟ ಸೀಟಲ್ಲಿ ಕೂತು ಬಂದಿದ್ರಾ, ರೆಸ್ಟ ಕೂಡ ತುಗೊಂಡಿದ್ರೂ, ನೀವೆನು ಅದೇ ನಿಮ್ಮ ರೆಡಿಮೇಡ ಉತ್ತರಗಳ ಬುಟ್ಟಿಯಿಂದ ಎರಡು ಉತ್ತರ ತೆಗೆದು ಹಲ್ಲು ಕಿರಿದಿದ್ರಿ" ಅಂತ ಚೆನ್ನಾಗೆ ತರಾಟೆಗೆ ತೆಗೆದುಕೊಂಡ್ಲು, "ಅಲ್ಲಾ ಸ್ಲೀಪರ ತುಗೊಬೇಕಿತ್ತು ಅಂತ ಹೇಳಿದ್ದು ತಪ್ಪಾ" ಅಂದೆ, "ರೀ ಸ್ಲೀಪರ್ ಸಿಕ್ಕಿರಲಿಲ್ಲ, ಆದ್ರೂ ನಿಮಗೆ ಆಕ್ಸಿಡೆಂಟ್ ಆಗಿ ಏನಾಯ್ತೊ ಅಂತ ನೋಡ್ಲಿಕ್ಕೆ ಓಡೋಡಿ ಬಂದಿದ್ರು, ಅದಕ್ಕೆ ಪ್ರತಿಯಾಗೆ, ಆ ನೋವು ನಿಮ್ಮೊಂದಿಗೆ ಹಂಚಿಕೊಂಡು ನಾಲ್ಕು ಮಾತಾಡ ಬಯಸಿದ್ರೆ, ನಿಮ್ಮ ಥಟ ಅಂತ ಹೇಳಿ ಉತ್ತರಗಳು" ಅಂದ್ಲು "ಅಯ್ಯೊ ನಾನ್ ಹಾಗೆ ಮಾತಾಡಬಾರ್ದಿತು ಎನ್ ಅನ್ಕೊಂಡ್ರೊ ಏನೊ" ಅಂದೆ "ಏನೂ ಇಲ್ಲಾ, ನಾನಿದ್ನಲ್ಲಾ, ಎಲ್ಲ ಕೇಳಿದೆ, ಅವರು ಎಷ್ಟೇ ಕಷ್ಟ ಆದ್ರೂ ಬಂದಿರೋರು, ಅದನ್ನ ನಿಮಗೆ ಹೇಳಬಯಸಿದ್ದರು ಅಷ್ಟೇ" ಅಂದ್ಲು. "ಅಂತೂ ಸೂಪರ್ ಸೊಸೆ ಅಂತ ಒಳ್ಳೇ ಛಾಪು ಮೂಡಿಸಿದೆ ಅನ್ನು" ಅಂದೆ. "ನಿನ್ನೆ ನಿಮ್ಮ ತಂಗಿ ಫೋನು ಮಾಡಿದ್ಲಲ್ಲ, ಹಾಸ್ಟೆಲ್ನಲ್ಲಿ ಅಡಿಗೆ ಸರಿ ಮಾಡ್ತಿಲ್ಲಾ ಅಂತ, 'ಹೊಟೆಲಗೆ ಹೋಗು' ಅಂತ ನಿಮ್ಮ ಪುಕ್ಕಟೆ ಸಲಹೆ, ಆಮೇಲೆ ನಾ ರಾತ್ರಿ ಫೋನು ಮಾಡಿ ಘಂಟೆ ಕಾಲ ಮಾತಾಡಿದೆ, ಅಲ್ಲಿನ ಅಡುಗೆ, ಅದತಿಂದು ಹೊಟ್ಟೆ ಕೆಟ್ಟಿದ್ದು ಎಲ್ಲಾ, ಫೋನಿಡೊವಾಗ, ಅವಳೇ ಹೇಳಿದ್ಲು, 'ಏನ್ ಅತ್ತಿಗೆ ಇನ್ನೊಂದು ವರ್ಷ ಹೇಗೊ ಕಳೆದು ಹೋಗುತ್ತೆ, ಅಲ್ಲದೇ ಯಾವ ಹಾಸ್ಟೆಲನಲ್ಲಿ ಅಷ್ಟು ಚೆನ್ನಾಗಿ ಊಟ ಸಿಗುತ್ತೆ, ಅದಕ್ಕೆ ಆವಾಗಾವಾಗ ಸ್ವಲ್ಪ ಬದಲಾವಣೆ ಅಂತ ಹೊಟೇಲಿಗೆ ಹೋಗ್ತೀನಿ' ಅಂತ, ಅಲ್ಲಿ ನಿಮ್ಮ ಹೊಟೆಲಿನ ಸಲಹೆ ಅವಳಿಗೆ ಬೇಕಿರಲಿಲ್ಲರೀ, ಅಲ್ಲಿರೊ ಕಷ್ಟ ಯಾರಿಗಾದ್ರೂ ಹೇಳ್ಕೊಬೇಕು ಅಂತಿತ್ತು" ಅಂದ್ಲು. ಹೀಗೆ ಒಂದೊಂದೇ ಘಟನೆ ಪುರಾವೆ ಸಮೇತ ಅವಳು ಹೊರಗೆ ತೆಗೀತಾ ಇದ್ರೆ, ನನ್ನ ತಪ್ಪುಗಳು ನನಗೆ ಗೊತ್ತಾಗ್ತಾ ಇದ್ವು. ಹಗರಣ ಹೊರಬಂದ ರಾಜಕಾರಣಿಯಂತೆ ಹತಾಶನಾಗಿದ್ದೆ, "ನಂಗೆ ಮೊದ್ಲಿಂದಾನೂ ಅಷ್ಟೆ, ಶಾಲೇಲಿ ಕೂಡ ನಾ ಮೊದಲು ತಾ ಮೊದಲು ಅಂತ ಪ್ರಶ್ನೆಗೆ ಉತ್ತರ ಹೇಳ್ತಾ ಇದ್ದೆ, ಅದೇ ರೂಢಿ, ಕೇಳಬೇಕು ಅಂತ ಯಾವಾಗ್ಲೂ ಅನಿಸಿರಲಿಲ್ಲ, ಈಗ ನೀ ಹೇಳಿದಾಗಲೇ ಗೊತ್ತಾಗಿದ್ದು" ಅಂತಂದೆ, "ರೀ ಸಪ್ಪೆ ಮುಖ ಯಾಕೆ ಮಾಡಿದ್ರಿ, ಯಾರು ತಪ್ಪು ಮಾಡಲ್ಲ, ನನ್ನ ಎಷ್ಟೊ ತಪ್ಪು ನೀವು ತಿದ್ದಿಲ್ವಾ" ಅಂದು ಹೊಟ್ಟೆಗೆ ಕಚಗುಳಿಯಿಟ್ಟು ನಗಿಸಿದ್ಲು. "ಹೋದ ಜನ್ಮದಲ್ಲಿ ಲಾಯರ(ವಕೀಲ) ಎನಾದ್ರೂ ಆಗಿದ್ಯಾ, ಅಧಾರ ಸಮೇತ ಎಲ್ಲವಾದ ಮಂಡಿಸಿ ಸೋಲಿಸಿ ಬಿಡ್ತೀಯ" ಅಂದೆ "ಎಲ್ಲಾ ನಿಮ್ಮಂಥ ಲೈಯರ್(ಸುಳ್ಳುಗಾರ) ಗಂಡ ಸಿಕ್ಕ ಮೇಲೆ ಕಲಿತದ್ದು" ಅಂದ್ಲು, "ನಾನ್ಯಾವಾಗ್ಲೇ ಸುಳ್ಳು ಹೇಳಿದೆ" ಅಂತ ಕೇಳಬೇಕೆನಿಸಿತು, ಆದ್ರೆ ಇನ್ನೊಂದು ಕಂತೆ ತಪ್ಪುಗಳನ್ನು ಎಲ್ಲಾದ್ರೂ ಹೊರತೆಗೆದಾಳು ಅಂತ ಸುಮ್ಮನಾದೆ.

ಯೋಚನೆ ಮಾಡಿ ಎಷ್ಟು ಸಾರಿ, ಹೀಗೆ ಮಾಡಿಲ್ಲ, ಗೆಳೆಯ ಫೋನು ಮಾಡಿ ಬೈಕು ಕಳೆದುಹೊಯ್ತೋ, ಅಂದ್ರೆ ಪೋಲೀಸ ಕಂಪ್ಲೇಂಟ ಕೊಡೊ ಅಂತೀವೆ, ಅದನ್ನ ಅವ ಆಗ್ಲೇ ಮಾಡಿರ್ತಾನೆ, ಟ್ರೇನ ಮಿಸ್ಸ ಆಯ್ತೊ ಅಂದ್ರೆ ಬೇಗ ಹೊಗಬೇಕಿತ್ತು, ಅಂತೀವಿ, ಅವರೂ ಪ್ರಯತ್ನ ಮಾಡಿರ್ತಾರೆ ಆಗಿರಲ್ಲ, ಗಂಡ ಮನೆಗೆ ಲೇಟಾಗಿ ಬಂದು, ಆಫೀಸಲ್ಲಿ ಕತ್ತೆ ಥರ ಕೆಲ್ಸಾ ಮಾಡಿ ಬಂದ್ರೆ ಈ ಬಸ್ಸು ಬೇರೆ ರಶು ಸಾಕಾಗಿದೆ ಎನ್ ಮಾಡ್ಲಿ ಅಂದ್ರೆ, ಹೇಂಡ್ತಿ ಥಟ್ ಅಂತ ಬೈಕು ತುಗೊಂಡು ಹೋಗಿ, ಅಂದ್ರೆ, ಅದು ಅವನಿಗೂ ಗೊತ್ತು, ಗ್ಯಾಸ ತೀರಿ ಹೋಗಿ ಸ್ಟವ್ ಮೇಲೆ ಅಡುಗೆ ಮಾಡಿ ಸಾಕಾಯ್ತು ಅಂತ ಅವಳು ಹೇಳಿದ್ದಕ್ಕೆ, ಮೊದಲೇ ಗ್ಯಾಸ್‌ಗೆ ಬುಕ್ ಮಾಡಬೇಕಿತ್ತು ಅಂದ್ರೆ. **ಅಲ್ಲಿ ಯಾರಿಗೂ ಸಲಹೆ ಅಥವಾ ಉತ್ತರ ಬೇಕಿಲ್ಲ, ಬೇಕಿರೋದು ಕೇಳೊ ಕಿವಿಗಳು ಮಾತ್ರ.**

ಸಂಜೆ ಊರಿಗೆ ಫೋನು ಮಾಡಿ ಘಂಟೆ ಮೇಲೆ ಮಾತಾಡಿದೆ, ಏನೊ ಮನಸ್ಸಿಗೆ ಶಾಂತಿ ಅನಿಸಿತು, ಫೋನು ಬಿಲ್ಲು ಬಂದಾಗ ಸ್ವಲ್ಪ ಅಶಾಂತಿ ಆಗಬಹುದು, ಆದರೆ ಇಂಥ ಸಂಭಾಷಣೆಗೆ ಆ ಬೆಲೆ ಇನ್ನೂ ಕಮ್ಮಿಯೇ ಅನಿಸಿಬಿಡುತ್ತದೆ, ಹೀಗೆ ಎನೊ ಮತ್ತೆ ಥಟ ಅಂತ ಹೇಳ್ತಾ, ಅಲ್ಲಲ್ಲ ನಿಮ್ಮಿಂದ ಕೇಳ್ತಾ ಕೂಡ ಮತ್ತೆ ಸಿಕ್ತೀನಿ... ನಿಮಗೇನನ್ನಿಸಿತೊ ಹೇಳಿ ನಾನು ಕೇಳ್ತೀನಿ.

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ–ಅಂಚೆ) ಹಾಕಿ... ನನ್ನ ವಿಳಾಸ pm@telprabhu.com .
ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...